**ಪಿಡಬ್ಲ್ಯೂ-1**

ದಿನಾಂಕಃ **04-11-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯ ಪರವಾಗಿ ಶ್ರೀ ಹೆಚ್.ಎಸ್.ಕೆ. ವಕೀಲರಿಂದಃ-

ನಮ್ಮ ಕುಟುಂಬದ ಮೂಲ ಪುರುಷ ಬಸವಯ್ಯನ ಹೆಂಡತಿ ಗೌರಮ್ಮ ಎಂದರೆ ಸರಿ. ಅವರಿಬ್ಬರೂ ಮೃತಪಟ್ಟಿರುತ್ತಾರೆಂದರೆ ಸರಿ. ಇವರಿಬ್ಬರಿಗೂ ಷಣ್ಮುಖಯ್ಯ, ಶಿವಲಿಂಗಯ್ಯ @ ಶಿವಲಿಂಗ ಮಹಾಸ್ವಾಮಿ, ಮಲ್ಲಿಕಾರ್ಜುನಯ್ಯ, ಈಶ್ವರಯ್ಯ, ಓಂಕಾರಮೂರ್ತಿ, ಕೆ.ಬಿ. ಜಯಣ್ಣ ಎನ್ನುವ ಮಕ್ಕಳು ಎಂದರೆ ಸರಿ. ಸದರಿಯವರ ಪೈಕಿ ಶಿವಲಿಂಗಯ್ಯ ಸನ್ಯಾಸತ್ವ ಸ್ವೀಕರಿಸಿರುತ್ತಾರೆಂದರೆ ಸರಿ. ಈಗ ಅವರು ಮೃತಪಟ್ಟಿರುತ್ತಾರೆ. ಈಗ ಅವರೆಲ್ಲರೂ ಮೃತಪಟ್ಟಿರುತ್ತಾರೆ.

ಮೇಲೆ ಹೇಳಿದ ಕೆ.ಬಿ.ಜಯಣ್ಣ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರ ಹೆಂಡತಿಯ ಹೆಸರು ಕೋಮಲ ಎಂದರೆ ಸರಿ. ಅವರಿಬ್ಬರು ಸಂತಾನ ಇಲ್ಲದೇ ಮೃತಪಟ್ಟಿರುತ್ತಾರೆಂದರೆ ಸರಿ. ಅವರಿಗೆ ಮಕ್ಕಳು ಇಲ್ಲದೇ ಇದ್ದ ಕಾರಣ ಅವರ ಅಣ್ಣ ಷಣ್ಮುಖ ನ ಮಕ್ಕಳನ್ನು ತನ್ನ ಜೊತೆ ಇಟ್ಟುಕೊಂಡು ಬೆಳೆಸಿದ್ದರು ಎಂದರೆ ಸರಿ. ಸುಮಾರು 30 ವರ್ಷಗಳಿಂದ ಬೇರೆ ಬೇರೆ ವಾಸವಿದ್ದೇವೆ. ಆದರೆ ಕುಟುಂಬದ ಆಸ್ತಿಗಳ ಜಂಟಿಯಾಗಿ ಮಾಡುತ್ತಿದ್ದೇವೆ ಎಂದರೆ ಸರಿ. ಷಣ್ಮುಖಯ್ಯನ ಮಕ್ಕಳನ್ನು ಕೆ.ಬಿ.ಜಯಣ್ಣನೇ ಸಾಕಿ ಸಲುಹಿದ್ದು ದಿಃ06-01-2009 ರಂದು ತನ್ನ ದಾವಾ ಆಸ್ತಿಯಲ್ಲಿರುವ ಹಿಸ್ಸೆಯ ಹಕ್ಕನ್ನು ಪ್ರತಿವಾದಿ 2 ರಿಂದ 6 ರವರ ಹೆಸರಿಗೆ ವಿಲ್ ಮೂಲಕ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಆ ಕಾರಣದಿಂದ ಪ್ರತಿವಾದಿ 2 ರಿಂದ 6 ರವರಿಗೆ 2/5 ಭಾಗಾಂಶದ ಹಕ್ಕು ಇದ್ದು ನಮಗೆ 1/5 ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ಮರಣ ಶಾಸನದ ಬಗ್ಗ ನಮಗೆಲ್ಲಾ ಗೊತ್ತಿದ್ದರೂ ಕೂಡ ಪ್ರತಿವಾದಿ 2 ರಿಂದ 6 ರವರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಎಲ್ಲಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನದಲ್ಲಿದ್ದೇವೆ. ಫಸಲನ್ನು ಈಗಲೂ ವಿಂಗಡಣೆ ಮಾಡಿ ಪಡೆಯುತ್ತಿದ್ದೇವೆ. ಆ ಕಾರಣದಿಂದ ನಮಗೆ ಯಾವುದೇ ಫಸಲು ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**(** ಕಿರಣ್ ಕುಮಾರ್ ಡಿ**.** ವಡಿಗೇರಿ **)**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ**. 04-11-2025.**